# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಶಿವಮೊಗ್ಗ ವಿಭಾಗ

ವಿಭಾಗೀಯ ಕಛೇರಿ, 3ನೇ ಮಹಡಿ, ಕ.ರಾ.ರ.ಸಾ.ನಿಗಮ ಬಸ್ ನಿಲ್ದಾಣ ಶಿವಮೊಗ್ಗ-577202

ಸಂ/ಕರಾಸಾ/ಶಿವಿ/ಸಂ/ವಾ/ 1226 /23-24 ದಿನಾಂಕ: 28-07-2023

## "ಇ-ಟೆಂಡರ್ ಮತ್ತು ಸಂಧಾನ ಪ್ರಕಟಣೆ ಸಂಖ್ಯೆ: 02/2023-24"

(ಸಾ.ಸ್ಥಾ.ಆ.ಸಂ.787/2017, 794/2018 & 809/2021ರಂತೆ)

ಕ.ರಾ.ರ.ಸಾ.ನಿಗಮ, ಶಿವಮೊಗ್ಗ ವಿಭಾಗದ ವ್ಯಾಪ್ತಿಗೆ ಬರುವ ಈ ಕೆಳಕಂಡ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ/ ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ದಿನಾಂಕ:**02-08-2023** ರಿಂದ ಇ-ಪ್ರೊಕ್ಯೂರ್‌ಮೆಂಟ್/ ಸಂಧಾನದ ಮೂಲಕ ಟೆಂಡರ್ ಹಾಗೂ ಸಂಧಾನದ ಅರ್ಜಿಯನ್ನು ಆಹ್ವಾನಿಸಲಾಗಿದೆ. **ಇ-ಟೆಂಡರ್** ದಸ್ತಾವೇಜು/ದಾಖಲೆಗಳನ್ನು **ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in** ನಿಂದ **ಡೌನ್‌ಲೋಡ್** ಮಾಡಿಕೊಳ್ಳಬಹುದು ಹಾಗೂ ಸಂಧಾನದ ಅರ್ಜಿಗಳನ್ನು ಈ ಕಛೇರಿಯಲ್ಲಿ ನಿಗಧಿಪಡಿಸಿದ ಸಮಯದೊಳಗಾಗಿ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ:24-08-2023 ರಂದು ಸಮಯ:11.30 ಗಂಟೆಗೆ ಮ್ಯಾನುಯಲ್ ಟೆಂಡರ್ ಮತ್ತು ಸಂಧಾನಕ್ಕೆ ನಿಗಧಿಪಡಿಸಿದ ಮಳಿಗೆಗಳಿಗೆ ಟೆಂಡರ್ ಹಾಗೂ ಸಂಧಾನದ ಮೂಲಕ ಪರವಾನಗಿದಾರರನ್ನು ಆಯ್ಕೆ ಮಾಡಲು ಈ ಕಛೇರಿಯಲ್ಲಿ ಟೆಂಡರ್/ಸಂಧಾನ ಸಭೆಗೆ ಆಹ್ವಾನಿಸಲಾಗಿದೆ. ಪರವಾನಗಿ ಅವಧಿ ಪೂರ್ಣಗೊಂಡ ನಂತರ ಪುನಃ ಟೆಂಡರ್ ಪ್ರಕಟಣೆ ಹೊರಡಿಸಲಾಗುವುದು.

**1. ಇ-ಟೆಂಡರ್‌ಗೆ ನಿಗಧಿಪಡಿಸಿರುವ ಮಳಿಗೆಗಳ ವಿವರ**

| ಕ್ರ. ಸಂ | ಬಸ್ ನಿಲ್ದಾಣ | ಮಳಿಗೆಯ ವಿವರ | ವಿಸ್ತೀರ್ಣ (ಚ.ಅ) | ಮಾದರಿ | ಅವಧಿ | ಕನಿಷ್ಠ ಮಾಸಿಕ ಪರವಾನಗಿ ಶುಲ್ಕ (ರೂ.ಗಳಲ್ಲಿ) | ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) ಡಿ.ಡಿ. ಮುಖಾಂತರ | ಇ.ಎಂ.ಡಿಮೊತ್ತ (ರೂ.ಗಳಲ್ಲಿ) ಇ-ಪ್ರೊಕ್ಯೂರ್ ಮೆಂಟ್ ಮುಖಾಂತರ | ಡಿ.ಡಿ ಮೂಲಕ ಈ ಕಛೇರಿಗೆ ಸಲ್ಲಿಸ ಬೇಕಾದ ಅರ್ಜಿ ಶುಲ್ಕ + ಜಿ.ಎಸ್.ಟಿ (ರೂ.ಗಳಲ್ಲಿ) | ಖಾಲಿಯಾಗುವ ದಿನಾಂಕ & ಮೀಸಲಾತಿ ವಿವರ |
|---|---|---|---|---|---|---|---|---|---|---|
| 1 | ಭದ್ರಾವತಿ | ಮಳಿಗೆ ಸಂಖ್ಯೆ-09 ಜನರಲ್ ಸ್ಟಾಲ್ | 193.68 | ಶಾಶ್ವತ | 5 ವರ್ಷ | 10,395 | 30,685 | 500 | 123/- | ಖಾಲಿ ಇದೆ/ ವಿಕಲಚೇತನ |
| 2 | ಭದ್ರಾವತಿ | ಮಳಿಗೆ ಸಂಖ್ಯೆ-08 ಜನರಲ್ ಸ್ಟಾಲ್ | 193.68 | ಶಾಶ್ವತ | 5 ವರ್ಷ | 12,967 | 38,401 | 500 | 154/- | 05-09-2023 / ಸಾಮಾನ್ಯ |
| 3 | ಹೊನ್ನಾಳಿ | ಮಳಿಗೆ ಸಂಖ್ಯೆ-06 ಜನರಲ್ ಸ್ಟಾಲ್ (ಮೊದಲನೇಮಹಡಿ) | 1438.07 | ಶಾಶ್ವತ | 5 ವರ್ಷ | 6,845 | 20,035 | 500 | 118/- | 21-09-2023 / ಪರಿಶಿಷ್ಟ ಪಂಗಡ |
| 4 | ಸಾಗರ | ಮಳಿಗೆ ಸಂಖ್ಯೆ-03 ಜನರಲ್ ಸ್ಟಾಲ್ | 186 | ಶಾಶ್ವತ | 5 ವರ್ಷ | 12,756 | 37,768 | 500 | 152/- | 20-12-2023 / ಪರಿಶಿಷ್ಟ ಜಾತಿ |
| 5 | ಶಿಕಾರಿಪುರ | ಹಾಲ್ ನಂ-01 (ಕಛೇರಿ ಉದ್ದೇಶಕ್ಕಾಗಿ)/ ಮೊದಲನೇ ಮಹಡಿ | 1687.06 | ಶಾಶ್ವತ | 10 ವರ್ಷ | 37,375 | 111,625 | 500 | 442/- | ಖಾಲಿ ಇದೆ/ ಸಾಮಾನ್ಯ |
| 6 | ಶಿಕಾರಿಪುರ | ಹಾಲ್ ನಂ-02 (ಕಛೇರಿ ಉದ್ದೇಶಕ್ಕಾಗಿ)/ ಮೊದಲನೇ ಮಹಡಿ | 2248.41 | ಶಾಶ್ವತ | 10 ವರ್ಷ | 49,811 | 148,933 | 500 | 588/- | ಖಾಲಿ ಇದೆ/ ಸಾಮಾನ್ಯ |
| 7 | ಸೊರಬ | ಮಳಿಗೆ ಸಂಖ್ಯೆ-01 ಜನರಲ್ ಸ್ಟಾಲ್ ಮೊದಲನೇ ಮಹಡಿ | 661 | ಶಾಶ್ವತ | 5 ವರ್ಷ | 9,049 | 26,647 | 500 | 118/- | ಖಾಲಿ ಇದೆ/ ಸಾಮಾನ್ಯ |
| 8 | ಸೊರಬ | ಮಳಿಗೆ ಸಂಖ್ಯೆ-02 ಜನರಲ್ ಸ್ಟಾಲ್ ಮೊದಲನೇ ಮಹಡಿ | 671 | ಶಾಶ್ವತ | 5 ವರ್ಷ | 9,183 | 27,049 | 500 | 118/- | ಖಾಲಿ ಇದೆ/ ಸಾಮಾನ್ಯ |
| **2. ಸಂಧಾನ/ಮಾತುಕತೆಗೆ ನಿಗಧಿಪಡಿಸಿರುವ ಮಳಿಗೆಯ ವಿವರ** | | | | | | | | | | |
| 1 | ಹೊನ್ನಾಳಿ | ಮಳಿಗೆ ಸಂಖ್ಯೆ-01 ಜನರಲ್ ಸ್ಟಾಲ್ | 96.88 | ಶಾಶ್ವತ | 5 ವರ್ಷ | - | 33,228 | - | 131/- | ಖಾಲಿ ಇದೆ/ ಸಾಮಾನ್ಯ |
| 2 | ಹೊನ್ನಾಳಿ | ಮಳಿಗೆ ಸಂಖ್ಯೆ-07 ಜನರಲ್ ಸ್ಟಾಲ್ (ಮೊದಲನೇಮಹಡಿ) | 183.22 | ಶಾಶ್ವತ | 5 ವರ್ಷ | 2,928 | 8,784 | - | 118/- | ಖಾಲಿ ಇದೆ/ ಸಾಮಾನ್ಯ |
| 3 | ಭದ್ರಾವತಿ | ದ್ವಿಚಕ್ರ ತಂಗುದಾಣ | 1510 | ತೆರೆದ | 3 ವರ್ಷ | - | 24,789 | - | 118/- | ಖಾಲಿ ಇದೆ/ ಸಾಮಾನ್ಯ |
| 4 | ಭದ್ರಾವತಿ | ಮಳಿಗೆ ಸಂಖ್ಯೆ-01 ಜನರಲ್ ಸ್ಟಾಲ್/ | 193.68 | ಶಾಶ್ವತ | 5 ವರ್ಷ | 7,706 | 23,118 | - | 118/- | ಖಾಲಿ ಇದೆ/ ಸಾಮಾನ್ಯ |

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಶಿವಮೊಗ್ಗ ವಿಭಾಗ, 3ನೇ ಮಹಡಿ, ಕ.ರಾ.ರ.ಸಾ.ನಿಗಮ ಶಿವಮೊಗ್ಗ ಬಸ್ ನಿಲ್ದಾಣ, ಶಿವಮೊಗ್ಗ-577 202 ಇವರಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ. ವಿವರಗಳು ಈ ಕೆಳಗಿನಂತಿದೆ.

| ಕ್ರ.ಸಂ. | ವಿವರ | ದಿನಾಂಕ | ಸಮಯ |
|---|---|---|---|
| 1 | ಇ-ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ) | **21-08-2023** | **17-00** |
| 2 | ಸಂಧಾನದ ಅರ್ಜಿ ಪಡೆಯಲು ಕೊನೆಯ ದಿನಾಂಕ | **21-08-2023** | **17-00** |
| 3 | ಅರ್ಜಿದಾರರು ಟೆಂಡರ್/ಸಂಧಾನ ಬಾಕ್ಸ್‌ಗೆ ಅರ್ಜಿ ಶುಲ್ಕ, ಇ.ಎಂ.ಡಿ. ಶುಲ್ಕದ ಮೂಲ ಡಿ.ಡಿ.ಗಳನ್ನು ಮತ್ತು ಇತರೆ ಅಗತ್ಯ ದಾಖಲೆಗಳನ್ನು(ಇ-ಪ್ರೊಕ್ಯೂರ್‌ಮೆಂಟ್‌ಗೆ ಅಪಲೋಡ್ ಮಾಡಿದ ದಾಖಲೆಗಳು ಹಾಗೂ ಅರ್ಜಿ ಫಾರಂ) ವಿಭಾಗದ ಸಂಚಾರ ಶಾಖೆಯಲ್ಲಿ ಟೆಂಡರ್/ಸಂಧಾನಕ್ಕಾಗಿ ಇರಿಸಿರುವ ಬಾಕ್ಸ್‌ನಲ್ಲಿ ಸಲ್ಲಿಸುವ ದಿನಾಂಕ ಮತ್ತು ಸಮಯ (ಕಛೇರಿ ಸಮಯ ಬೆಳಗ್ಗೆ 10 ರಿಂದ ಸಂಜೆ 5.30ರವರೆಗೆ ಇರುತ್ತದೆ) | ದಿ:**22-08-2023** ರ ಬೆಳಗ್ಗೆ **10-30** ರಿಂದ ದಿ:**23-08-2023** ರ ಸಂಜೆ **17-00** ರವರೆಗೆ | |

Scanned with CamScanner

| | | | |
|---|---|---|---|
| 4 | ಇ-ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ಯಾವುದೇ ತಾಂತ್ರಿಕ ದೋಷ ಇಲ್ಲದಿದ್ದಲ್ಲಿ) | 24-08-2023 | 11-30 |
| 5 | ಸೆಂಧಾನ ಸಭೆ ನಡೆಸುವ ದಿನಾಂಕ ಮತ್ತು ಸಮಯ | 24-08-2023 | 11-30 |
| ಸಂಪರ್ಕಿಸುವ ದೂರವಾಣಿ ಸಂಖ್ಯೆ : - | ವಿಭಾಗೀಯ ಸಂಚಲನಾಧಿಕಾರಿ-7625078552/ ಸಹಾಯಕ ಸಂಚಾರ ಅಧೀಕ್ಷಕರು-6364912197<br>ಇ-ಪೋರ್ಟಲ್ ಸಹಾಯವಾಣಿ ಕೇಂದ್ರ – +91-8046010000 +91-8068948777 | | |

**ವಿಶೇಷ ಸೂಚನೆಗಳು:-**

1) ಸಂಧಾನ/ಮಾತುಕತೆಯ ಬಗ್ಗೆ ಅರ್ಜಿ ಫಾರಂ, ಷರತ್ತು ಹಾಗೂ ನಿಬಂಧನೆಗಳನ್ನು, ದಿನಾಂಕ:02.08.2023 ರಿಂದ ದಿ:21.08.2023ರಂದು ಸಮಯ 17.00ಗಂಟೆಯವರೆಗೆ ಮಳಗೆಗೆ ನಿಗದಿಪಡಿಸಿದ ನಿಗದಿತ ಅರ್ಜಿ ಶುಲ್ಕಕ್ಕೆ ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಶಿವಮೊಗ್ಗ ವಿಭಾಗರವರ ಪದನಾಮಕ್ಕೆ ಡಿ.ಡಿ. ಪಡೆದು, ಕಛೇರಿ ವೇಳೆಯಲ್ಲಿ ಅರ್ಜಿ ಶುಲ್ಕದ ಡಿ.ಡಿ. ಸಲ್ಲಿಸಿ ಅರ್ಜಿಯನ್ನು ಪಡೆಯಬಹುದಾಗಿದೆ.
2) ಸಂಧಾನ/ಮಾತುಕತೆಯಲ್ಲಿ ಭಾಗವಹಿಸುವಾಗ ನಿಗಮದ ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿಕೊಂಡು. ಇ.ಎಂ.ಡಿ ಮೊತ್ತವನ್ನು ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿಗಮ, ಶಿವಮೊಗ್ಗ ವಿಭಾಗ(Divisional Controller, KSRTC, Shivamogga Division)ರವರ ಹೆಸರಿನಲ್ಲಿ ಪಡೆದ ಡಿ.ಡಿಯ ಮೂಲ ಪ್ರತಿ ಹಾಗೂ ಅಗತ್ಯ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಭರ್ತಿ ಮಾಡಿದ ಅರ್ಜಿ ಫಾರಂ ಹಾಗೂ ಅಡಕದೊಂದಿಗೆ ದಿನಾಂಕ:22.08.2023ರ ಬೆಳಗ್ಗೆ ಸಮಯ 10.30 ರಿಂದ ದಿನಾಂಕ:23.08.2023ರ ಸಂಜೆ 17:00ಗಂಟೆಯೊಳಗಾಗಿ(ಕಛೇರಿ ಅವಧಿಯಲ್ಲಿ) ಮುಚ್ಚಿದ ಲಕೋಟೆಯಲ್ಲಿ ವಿಭಾಗದ ಸಂಚಾರ ಶಾಖೆಯಲ್ಲಿ ಟೆಂಡರ್‌ಗಾಗಿ ಇರಿಸಿರುವ ಬಾಕ್ಸ್‌ನಲ್ಲಿ ಖುದ್ದಾಗಿ ಹಾಕುವುದು ಹಾಗೂ **ಅರ್ಜಿದಾರರು/ಬಿಡ್‌ದಾರರು** ದಿನಾಂಕ:24.08.2023ರಂದು **ಸಮಯ ಬೆಳಗ್ಗೆ 11.30 ಗಂಟೆಗೆ ವಿಭಾಗೀಯ ಕಛೇರಿಯಲ್ಲಿ, ಟೆಂಡರ್/ಸಂಧಾನ ಸಮಿತಿಯ ಸಮ್ಮುಖದಲ್ಲಿ ನಡೆಸಲಾಗುವ ಟೆಂಡರ್/ಸಂಧಾನ/ಮಾತುಕತೆ ಸಭೆಗೆ ಎಲ್ಲಾ ಮೂಲ ದಾಖಲೆಗಳೊಂದಿಗೆ ಭಾಗವಹಿಸುವುದು.**
3) ಸಂಧಾನದಲ್ಲಿ ಭಾಗವಹಿಸಿ ನಿಗದಿಪಡಿಸಿದ ನಿಗದಿತ ಶುಲ್ಕ ಅಥವಾ ಹೆಚ್ಚಿಗೆ ಮಾಸಿಕ ಶುಲ್ಕವನ್ನು ಸೂಚಿಸಿ ಆಯ್ಕೆಗೊಂಡ ಅರ್ಜಿದಾರರು/ ಬಿಡ್‌ದಾರರು ಆಯ್ಕೆಪತ್ರ ತಲುಪಿದ ದಿನಾಂಕದಿಂದ ಹದಿನೈದು(೧೫) ದಿನಗಳಗೆ ಮೀರದಂತೆ ನಿಗದಿಪಡಿಸಿರುವ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಪರವಾನಗಿ ಶುಲ್ಕ ಪಾವತಿಸಿ, ಕರಾರು ಒಪ್ಪಂದ ಮಾಡಿಕೊಳ್ಳುವುದು.
4) ನಿಗದಿತ ಮಾಸಿಕ ಪರವಾನಗಿ ಶುಲ್ಕಕ್ಕಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕ ಸೂಚಿಸಿದ ಅರ್ಜಿದಾರರಿಗೆ/ಬಿಡ್‌ದಾರರಿಗೆ ಕೇಂದ್ರ ಕಛೇರಿಯಿಂದ ಅನುಮತಿ ಪಡೆದು ಆಯ್ಕೆಗೊಂಡಲ್ಲಿ, ಆಯ್ಕೆಪತ್ರ ತಲುಪಿದ ದಿನಾಂಕದಿಂದ ಹದಿನೈದು(೧೫) ದಿನಗಳಗೆ ಮೀರದಂತೆ ನಿಗದಿಪಡಿಸಿರುವ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಪರವಾನಗಿ ಶುಲ್ಕ ಪಾವತಿಸಿ, ಕರಾರು ಒಪ್ಪಂದ ಮಾಡಿಕೊಳ್ಳುವುದು.
5) ಸಂಧಾನ/ಮಾತುಕತೆಗೆ ಸಂಬಂಧಿಸಿದ ಅರ್ಜಿ ಫಾರಂ ಮತ್ತು ಇತರೆ ದಾಖಲೆಗಳನ್ನು ಈ ಕಛೇರಿಯಲ್ಲಿ ಕೆಲಸದ ಸಮಯದಲ್ಲಿ ಪಡೆಯಬಹುದಾಗಿರುತ್ತದೆ.
6) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್‌ಗೆ ಭಾಗವಹಿಸಲಿಚ್ಛಿಸುವ ಆಸಕ್ತರು **ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್** ಮೂಲಕ ಟೆಂಡರ್ ದಾಖಲೆಗಳನ್ನು ನಿಗಧಿತ ಅವಧಿಯೊಳಗೆ ಡೌನಲೋಡ್ ಮಾಡಿಕೊಂಡು ಅರ್ಜಿ ಸಲ್ಲಿಸುವುದು.

**ವಿಭಾಗೀಯ ನಿಯಂತ್ರಣಾಧಿಕಾರಿ**
ಕ.ರಾ.ರ.ಸಾ.ನಿಗಮ : ಶಿವಮೊಗ್ಗ ವಿಭಾಗ

Scanned with CamScanner